ಶ್ರೀ ಬಿ. ಎಂ. ಇದಿನಬ್ಬ.—ಒಟ್ಟು ಸುಮಾರು 140 ಕಡೆಗಳಲ್ಲಿ ಒಳಪ್ರದೇಶದಲ್ಲಿ ಈ ಸಮ್ಮೇಳನ ನಡೆಸಿದ್ದೀರಿ. ಅದರಲ್ಲಿ ನೀವು ಹೋದಂಥ ಸಮ್ಮೇಳನದಲ್ಲಿ ಅಥವಾ ಡೈರಕ್ಟರ್ ಹೋದಂಥ ಸಮ್ಮೇಳನದಲ್ಲಿ 25 ಸಾವಿರ ರೂಪಾಯಿಗಿಂತಲೂ ಹೆಚ್ಚಿಗೆ ಹಣ ಆದಾಯ ಬರುವ ಯೋಜನೆ ಕಂಡು ಬಂದಿಲ್ಲ. ಆದುದರಿಂದ ಒಳಪ್ರದೇಶದಲ್ಲಿ ಆರೀತಿ ಕಂಡು ಬರದಿದ್ದರೆ ಕರಾವಳಿ ಪ್ರದೇಶದಲ್ಲಾದರೂ ಹೆಚ್ಚಿಗೆ ಸಮ್ಮೇಳನಗಳನ್ನು ನಡೆಸಿದರೆ ಈ ಹಣ ಭರ್ತಿ ಆಗುತ್ತದೆ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾನು ಆಗಲೇ ಹೇಳಿದಂತೆ ಈ ಸಮ್ಮೇಳನ ನಡೆಸಿದ್ದರಿಂದ ಜನಗಳಲ್ಲಿ ಮೀನನ್ನು ಇನ್ನೂ ಹೆಚ್ಚು ಬೆಳೆಸಬೇಕೆನ್ನುವ ಭಾವನೆ ಇದೆ. ಆದರೆ ಅದು ಅನುಭವದಲ್ಲಿ ಬರಬೇಕು. ಮತ್ತೆ ಈ ಮೀನನ್ನು ತಿನ್ನಬೇಕು ಎನ್ನುವ ದಾಹ ಹೆಚ್ಚಾಗಿ ಹುಟ್ಟಬೇಕು. ಆದುದರಿಂದ ಈ ರೀತಿ ಸಮ್ಮೇಳನ ಮಾಡಿದ್ದರಿಂದ ಮೀನಿನ ಮರಿಗಳನ್ನು ಪಂಚಾಯಿತಿಗೆ ಮತ್ತು ಖಾಸಗಿ ಯವರಿಗೆ ಒದಗಿಸುವುದೇ ಕಷ್ಟವಾಗಿದೆ. ಮೀನಿನ ಅಭಿವೃದ್ಧಿ ಹೆಚ್ಚಾಗಿ ಆಗುವಂತೆ ಸಮ್ಮೇಳನ ಗಳನ್ನು ನಡೆಸಬೇಕು. ಫಿಷ್ ಫಾರಂಗಳನ್ನು ಹೆಚ್ಚಿಗೆ ಮಾಡಿ ಮೀನಿನ ಮರಿಗಳನ್ನು ಡಾಸ್ತಿ ಉತ್ಪನ್ನ ಮಾಡಬೇಕಾಗಿದೆ. ಇನ್ನೂ ಹೆಚ್ಚಿಗೆ ಮೀನಿನ ಮರಿಗಳನ್ನು ಉತ್ಪಾದನೆ ಮಾಡಿ ಅದನ್ನು ರೂರರ್ ಪಂಚಾಯಿತಿಗಳಿಗೂ ಮತ್ತು ರೈತಬಾಂಧವರಿಗೂ ಕೊಡುವುದರಿಂದ ಇನ್ನೂ ಹೆಚ್ಚಿನ ಪ್ರಯೋಜನವಾಗುತ್ತದೆ.

Unemployed Engineering Diploma Holders and Graduates in the State

623. Sri N. A. CHANNE GOWDA (Pandavapura).—

Will the Minister for Law, Labour and Parliamentary Affairs be pleased to state.—

(*a*) the number of unemployed Engineering Diploma holders and Graduates in the state ;

(*b*) the steps the State Government has taken to give assistance to such of them who intend to start private profession ;

(*c*) whether the Government has any plan before it in this connection ?

Sri K. PUTTASWAMY (Minister for Law, Labour and Parliamentary Affairs) —

(*a*) No survey has been made of the exact numbers of unemployed Engineering Diploma holders and Graduates in the State at present, However, the figures of engineering diploma holders and graduates borne on the Live Register of Employment Exchanges in the State as on 31st December 1969 is as detailed below.

Engineering Diploma holders	...	5,600
Graduates	...	1,402

(*b*) and (*c*) Concessions are allowed to Civil Engineers who desire to register as contractors in the Public Works Department. The State Bank of India and its subsidiaries offer liberalised financial facilities to technically qualified persons to start their own industries. Efforts have been made to bring home to unemployed engineers the potential for setting up small scale industries. Full use is also being made of the stipendiary scheme of the Government of India.

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, (ಅ) ಗೆ ಉತ್ತರವಾಗಿ ಇಂಜನಿಯರಿಂಗ್ ಡಿಪ್ಲೊಮೊದಾರರುಗಳು 5600 ಜನ ಮತ್ತು ಇಂಜನಿಯರಿಂಗ್ ಪದವೀಧರರುಗಳು 1402 ಜನ ಎಂದು ಹೇಳಿದ್ದೀರಿ. ಇದರಲ್ಲಿ ಎರೆಕ್ಟ್ರಿಕಲ್, ಸಿವಿಲ್, ಮೆಕ್ಯಾನಿಕರ್ಸ್‌ಗೆ ಎಷ್ಟೆಷ್ಟು ಜನ ಇದ್ದಾರೆಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ಡ್ ಮಾಡಿದ ಅಂಕಿ ಸಂಖ್ಯೆ ಪ್ರಕಾರ ನಾನು ಹೇಳುವುದು ಅಂಕಿಸಂಖ್ಯೆ ಈ ರೀತಿ ಇದೆ.

ಇಂಜನಿಯರಿಂಗ್ ಪದವೀಧರರು :

ಸಿವಿಲ್	...	354
ಮೆಕಾನಿಕಲ್	...	379
ಎರೆಕ್ಟ್ರಿಕಲ್	...	595
ಬೇರೆ ಪದವೀಧರರು	...	74

ಇಂಜನಿಯರಿಂಗ್ ಡಿಪ್ಲೋಮೊದಾರರು :

ಸಿವಿಲ್	...	1902
ಮೆಕಾನಿಕಲ್	...	1822
ಎರೆಕ್ಟ್ರಿಕಲ್	...	1511
ಅದರ್ಸ್	...	365

ಶ್ರೀ ಎನ್. ಎ. ಚನ್ನೇಗೌಡ.—ಇಷ್ಟುಮಂದಿ ನಿರುದ್ಯೋಗಿಗಳು ಇರುವುದರಿಂದ ನೀವು ಹೇಳಿದ ಡೈವರ್ಸಿಫೈಡ್ ಕೋರ್ಸ್‌ಗಳನ್ನು ಜಾಬ್ ಓರಿಯೆಂಟೆಡ್, ವರ್ಕ್‌ಓರಿಯೆಂಟೆಡ್ ಮಾಡಿ ಇಂಜನಿಯರಿಂಗ್ ಎಜುಕೇಷನ್ ಕೊಡುವುದನ್ನು ಯೋಚನೆ ಮಾಡುತ್ತೀರಾ?

Sri K. PUTTASWAMY.—That is a suggestion for consideration.

ಶ್ರೀ ಎಂ. ಎಸ್. ಕೃಷ್ಣನ್.—ತಾವು 'ಬಿ' ಮತ್ತು 'ಸಿ' ಗೆ ಉತ್ತರವಾಗಿ "Concessions are allowed to Civil Engineers who desire to register as contractors in the public Works Department." ಎಂದು ಹೇಳಿದ್ದೀರಿ. ಇದರಲ್ಲಿರುವ ತೊಂದರೆ ಒಂದನೆಯದಾಗಿ ಎರೆಕ್ಟ್ರಿಕಲ್ ಮತ್ತು ಡಿಪ್ಲೊಮಾ ಹೋಲ್ಡರ್ಸ್ ರಿಜಿಸ್ಟರ್ ಮಾಡಿಸುವುದಕ್ಕೆ ಹೋದರೆ ನಿನಗೆ ಸಿವಿಲ್ ಓದಿರ್ಲಾ ನೀನು ಹೇಗೆ ಕಂಟ್ರಾಕ್ಟ್ ಮಾಡುತ್ತೀಯಾ ಎನ್ನುತ್ತಾರೆ. ಈ ತರಹ ಕಂಪ್ಲೈಟ್ ಬಂದಿದೆ ಇದಕ್ಕೆ ಏನು ಹೇಳುತ್ತೀರಾ?

ಎರಡನೆಯದಾಗಿ ಕಂಟ್ರಾಕ್ಟರ್ ಆಗಿ ರಿಜಿಸ್ಟರ್ ಮಾಡಿಸಿಕೊಳ್ಳುವುದಕ್ಕೆ ಕನ್‌ಸೆಷನ್ ಕೊಡುತ್ತೀರಾ, ಆದರೆ ಕಂಟ್ರಾಕ್ಟ್ ಬೇರೆಯವರಿಗೆ ಕೊಡುವ ಬದಲು ಆದಷ್ಟುಮಟ್ಟಿಗೆ ಇಂಜನಿಯರಿಂಗ್ ಕಂಟ್ರಾಕ್ಟ್‌ಸ್‌ಗೆ ಕೊಡಬೇಕು ಎನ್ನುವ ನಿಷ್ಟ ಭರವಸೆ ನೀಡುತ್ತೀರಾ?

Sri K. PUTTASWAMY —The orders of the Government are very very definite. The concessions that are given to the Engineering Graduates can be ascertained from the Government Orders. Moreover, in the course of to-day, a brochure is being placed in the hands of all the Members regarding the concessions that are given to the Engineering Graduates and also other Graduates.

ಶ್ರೀ ಸಿದ್ದಯ್ಯ ಕಾಶಿಮಠ್.—ಪಿ. ಡಬ್ಲ್ಯೂ. ಡಿ. ಕಂಟ್ರಾಕ್ಟರುಗಳಿಗಾಗಿ ರಿಜಿಸ್ಟರ್ ಆದಂಥ ಅನ್‌ಎಂಪ್ಲಾಯ್ಡ್ ನಿರುದ್ಯೋಗಿಗಳು ಕಂಟ್ರಾಕ್ಟ್ ಕೆಲಸ ಮುಂದುವರಿಸುವುದಕ್ಕೆ ಅವರಿಗೆ ಫೈನಾಷಿಯಲ್ ಎಡ್ ಯಾವ ರೀತಿ ಕೊಡುತ್ತಾ ಇದ್ದೀರಾ?

Sri K. PUTTASWAMY.—They can obtain financial aid from the Scheduled Banks.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—(ಅ) ಉತ್ತರವಾಗಿ ತಾಂತ್ರಿಕ ಅರ್ಹತೆಗಳನ್ನು ಪಡೆದಿರುವ ವ್ಯಕ್ತಿಗಳಿಗೆ, ಅವರುಗಳು ತಮ್ಮದೇ ಆದ ಕೈಗಾರಿಕೆಗಳನ್ನು ಪ್ರಾರಂಭಿಸುವ ಬಗ್ಗೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಉಪಶಾಖೆಗಳು ಉದಾರ ಆರ್ಥಿಕ ಶೆಲ್ಪಗಳನ್ನು ನೀಡುತ್ತಿದ್ದಾರೆ ಎಂದು ಹೇಳಿದ್ದೀರಿ. ಅವರು ಹಣವನ್ನು ಒದಗಿಸಬೇಕಾದರೆ ಏನಾದರೂ ನಿಯಮಗಳನ್ನು ಅಳವಡಿಸಿದ್ದಾರೆಯೇ ?

Sri K. PUTTASWAMY.—Those terms and conditions may be obtained from the Scheduled Banks.

Sri D. M. SIDDIAH.—In view of the help forthcoming from the Government of India as well as the State Bank of Mysore, what is the proposal of our own Government to solve the problem of unsolved Graduates etc. ?

Sri K. PUTTASWAMY.—Government are taking steps to give some short of employment to unemployed graduates and the Government Order has already been published. I think the hon. Members might have received those Government Orders.

Sri ABDUL KHUDUS ANVAR.—How many diploma holders and Engineers have been provided contract works ? Has it come to the notice of the Government that those unemployed engineers applied to the P. W. D. for contract ? If so, have those people been awarded contracts ?

Sri K. PUTTASWAMY.—That does not come to my notice. I want notice for that question.

ಶ್ರೀ ಎಚ್. ಬಿ. ಜ್ವಾಲನಯ್ಯ.—ನಮ್ಮ ದೇಶದಲ್ಲಿರುವ ಕೇಂದ್ರ ಸರ್ಕಾರಕ್ಕೆ ಸೇರಿದ ಕೈಗಾರಿಕೆಗಳಲ್ಲಿ ನಮ್ಮ ಮೈಸೂರಿನ ಅನ್‌ಎಂಪ್ಲಾಯ್ ಡಿಗ್ರಿಹೋಲ್ಡರ್ಸ್ ಮತ್ತು ಡಿಪ್ಲೊಮಾ ಹೋಲ್ಡರ್ಸ್ ಏನು ಇದ್ದಾರೆ ಅವರನ್ನು ಆ ಕೈಗಾರಿಕೆಗಳಲ್ಲಿ ತೆಗೆದುಕೊಳ್ಳುವ ಮಾತೇ ಇಲ್ಲ. ಹೊರಗಡೆಯವರಿಗೇನೇ ಹೆಚ್ಚು ಉದ್ಯೋಗವನ್ನು ಕೊಡುತ್ತಿದ್ದಾರೆ. ಆದುದರಿಂದ ನಮ್ಮ ರಾಜ್ಯದಲ್ಲಿರುವ ನಿರುದ್ಯೋಗಿಗಳಾದ ಡಿಪ್ಲೊಮಾ ಹೋಲ್ಡರ್ಸ್‌ನವರಾಗಲೀ, ಇಂಜನಿಯರಿಂಗ್ ಗ್ರಾಜುಯೇಟ್ಸ್ ನವರಾಗಲಿ ಅವರಿಗೆ ಕೇಂದ್ರ ಸರ್ಕಾರಕ್ಕೆ ಸೇರಿದ ಕೈಗಾರಿಕೆಗಳಲ್ಲಿ ಕೆಲಸ ಕೊಡದೆ ವಾಪಸ್ಸು ಕಳುಹಿಸಿರುವ ಸಂದರ್ಭದಲ್ಲಿ ಅವರನ್ನು ಖಡ್ಡಾಯವಾಗಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಖಡ್ಡಾಯವಾಗಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. Government have been issuing appeals to all Industries Central, State as well as private undertakings to give encouragement to our engineering graduates.

ಶ್ರೀ ಎನ್. ಎ. ಚನ್ನೇಗೌಡ.—ಭಾರತ ಸರ್ಕಾರದವರು ಕಾಲ ಕಾಲಕ್ಕೆ ನಿಯಮಿತವಾಗಿ ಕೊಡುವ ಹಣದ ಯೋಜನೆಯ ಉಪಯೋಗವನ್ನೂ ಸಹ ಪೂರ್ತಿಯಾಗಿ ಉಪಯೋಗಿಸಿಕೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ. ಈ ಯೋಜನೆಯಂತೆ ಎಷ್ಟು ಜನ ನಿರುದ್ಯೋಗಿ ಇಂಜನೀಯರುಗಳು ಉಪಯೋಗ ಮಾಡಿಕೊಂಡಿದ್ದಾರೆ ? ಮತ್ತು ನಿರುದ್ಯೋಗಿಗಳಾಗಿರುವ ಪದವೀಧರರು ಎಷ್ಟು ಕಡೆಗಳಲ್ಲಿ ಸ್ಮಾಲ್ ಸ್ಕೇರ್ ಇಂಡಸ್ಟ್ರೀಸ್‌ನ್ನು ಪ್ರಾರಂಭ ಮಾಡಿದ್ದಾರೆ ? ಮತ್ತು ಬ್ಯಾಂಕಿಂಗು ಫೆಸಿಲಿಟೀಸ್‌ಗಳನ್ನು ಕೊಡುವಾಗ ಇಮ್ಮೂವಬಲ್ ಪ್ರಾಪರ್ಟೀಸ್‌ನ್ನು ಆಧಾರ ಮಾಡಿಕೊಡಬೇಕು ಎಂದು ಹೇಳುತ್ತಾರೆ. ಆದರೆ ನಿರುದ್ಯೋಗಿಗಳಾಗಿರುವ ಇಂಜನೀಯರ್‌ರವರಿಗೆ ಇಮ್ಮೂವಬಲ್ ಪ್ರಾಪರ್ಟಿಗಳು ಇರುವುದಿಲ್ಲ. ಇಂತಹವರಿಗೆ ಅನುಕೂಲ ಮಾಡಲು ಏನು ಮಾಡುತ್ತೀರಿ ?

Sri K. PUTTASWAMY.—The hon. Member has put two questions. For the first one I require notice. For the second question, the information is not with me.